All India Radio: Bangalore
National Bulletin In Kannada
07.06.2025  1.10 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ರೈತರ ಕಲ್ಯಾಣಕ್ಕೆ ಕೇಂದ್ರ ಸರ್ಕಾರ ಬದ್ಧ - ಪ್ರಧಾನಿ ನರೇಂದ್ರ ಮೋದಿ
- ದೇಶದಲ್ಲಿ ೨೬೯ ದಶಲಕ್ಷ ಜನರು ಬಡತನ ರೇಖೆಯಿಂದ ಹೊರಕ್ಕೆ: ವಿಶ್ವಬ್ಯಾಂಕ್ ವರದಿ
- ವಿಕಸಿತ ಕೃಷಿ ಸಂಕಲ್ಪ ಅಭಿಯಾನ: ಮಧ್ಯಪ್ರದೇಶದ ರೈತರೊಂದಿಗೆ ಇಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಸಂವಾದ
- ಫ್ರೆಂಚ್ ಓಪನ್ ಟೆನಿಸ್: ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿಂದು ಅರಿನಾ ಸಬಲೆಂಕಾ - ಕೋಕೋ ಗೌಫ್ ಸೆಣಸಾಟ

<><><><>

ದೇಶದ ರೈತರ ಕಲ್ಯಾಣಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದ್ದಾರೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ೧೧ ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದಲ್ಲಿ ಮಾತನಾಡಿದ ಅವರು, ಕಷ್ಟಪಟ್ಟು ದುಡಿಯುವ ರೈತರಿಗೆ ಸೇವೆ ಸಲ್ಲಿಸುವುದು ಸರ್ಕಾರಕ್ಕೆ ಒಂದು ಸೌಭಾಗ್ಯವಾಗಿದೆ ಎಂದು ಹೇಳಿದರು. ಕಳೆದ ೧೧ ವರ್ಷಗಳಿಂದ ಕೇಂದ್ರ ಸರ್ಕಾರದ ವಿವಿಧ ಉಪಕ್ರಮಗಳು ರೈತರ ಸಮೃದ್ಧಿಯನ್ನು ಹೆಚ್ಚಿಸಿವೆ ಮತ್ತು ಕೃಷಿ ಕ್ಷೇತ್ರದ ಒಟ್ಟಾರೆ ಪರಿವರ್ತನೆಯನ್ನು ಖಚಿತಪಡಿಸಿವೆ ಎಂದರು.  ಮಣ್ಣಿನ ಆರೋಗ್ಯ ಮತ್ತು ನೀರಾವರಿಯಂತಹ ವಿಷಯಗಳ ಮೇಲೆ ಸರ್ಕಾರ ಗಮನಹರಿಸಿದ್ದು, ಇದು ಬಹಳ ಪ್ರಯೋಜನಕಾರಿಯಾಗಿದೆ. ರೈತರ ಕಲ್ಯಾಣಕ್ಕಾಗಿ ಸರ್ಕಾರದ ಪ್ರಯತ್ನಗಳು ಮುಂಬರುವ ದಿನಗಳಲ್ಲಿ ಹೆಚ್ಚಿನ ಹುರುಪಿನಿಂದ ಮುಂದುವರಿಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

<><><><>

ಇದೇ ತಿಂಗಳಲ್ಲಿ ಕೆನಡಾದ ಕನನಾಸ್ಕಿಸ್‌ನಲ್ಲಿ ನಡೆಯಲಿರುವ ಜಿ-೭ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಇದೇ ೧೫ ರಿಂದ ೧೭ ರವರೆಗೆ ಕೆನಡಾದ ಆಲ್ಬರ್ಟಾ ಪ್ರಾಂತ್ಯದ ಕನನಾಸ್ಕಿಸ್‌ನಲ್ಲಿ ಗ್ರೂಪ್ ಆಫ್ ಸೆವೆನ್-ಜಿ-೭ ಶೃಂಗಸಭೆ ನಡೆಯಲಿದೆ. ಈ ಕುರಿತು ಒಟ್ಟಾವಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ, ಜಿ೭ ಶೃಂಗಸಭೆಯು ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಪಾಲುದಾರಿಕೆಯನ್ನು ರೂಪಿಸುವತ್ತ ಗಮನಹರಿಸುತ್ತದೆ ಎಂದು ಹೇಳಿದರು. ಭಾರತವು ವಿಶ್ವದ ಅತಿದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಿದ್ದು, ಜಾಗತಿಕ ಪೂರೈಕೆ ಸರಪಳಿಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದರಿಂದ ಭಾರತವು ಈ ವೇದಿಕೆಯಲ್ಲಿರಬೇಕು ಎಂದು ಅವರು ಪ್ರತಿಪಾದಿಸಿದರು.

<><><><>

ತೀವ್ರ ಬಡತನ ಪ್ರಮಾಣ ಕಡಿಮೆ ಮಾಡುವಲ್ಲಿ ಭಾರತ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ೨೦೧೧-೧೨ ಮತ್ತು ೨೦೨೨-೨೩ ರ ನಡುವೆ ೨೬೯ ದಶಲಕ್ಷ ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ.  ವಿಶ್ವಬ್ಯಾಂಕ್‌ನ ಇತ್ತೀಚಿನ ಮಾಹಿತಿಯ ಪ್ರಕಾರ, ತೀವ್ರ ಬಡತನದ ಪ್ರಮಾಣವು ೨೦೧೧-೧೨ ರಲ್ಲಿ ಶೇಕಡ ೨೭.೧ ರಿಂದ ೨೦೨೨-೨೩ ರಲ್ಲಿ ಗಮನಾರ್ಹವಾಗಿ ಶೇಕಡಾ ೫.೩ ಕ್ಕೆ ಇಳಿದಿದೆ. ೨೦೧೧-೧೨ ರಲ್ಲಿ, ಭಾರತದಲ್ಲಿ ಸುಮಾರು ೩೪೪.೪೭ ದಶಲಕ್ಷ ಜನರು ತೀವ್ರ ಬಡತನದಲ್ಲಿ ವಾಸಿಸುತ್ತಿದ್ದರು. ೨೦೨೨-೨೩ ರ ಹೊತ್ತಿಗೆ, ಈ ಸಂಖ್ಯೆ ೭೫.೨೪ ದಶಲಕ್ಷಕ್ಕೆ ಇಳಿದಿದೆ. ಈ ಪ್ರಗತಿಯು ಬಹುಪಾಲು ಉತ್ತರ ಪ್ರದೇಶ, ಮಹಾರಾಷ್ಟ್ರ, ಬಿಹಾರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಂತಹ ರಾಜ್ಯಗಳಿಂದ ಬಂದಿದೆ. ಕಳೆದ ದಶಕದಲ್ಲಿ ಒಟ್ಟು ಬಡತನ ನಿವಾರಣೆಯ ಮೂರನೇ ಎರಡರಷ್ಟು ಭಾಗಕ್ಕೆ ಈ ರಾಜ್ಯಗಳು ಕೊಡುಗೆ ನೀಡಿವೆ. ೧೧ ವರ್ಷಗಳ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಬಡತನವು ೧೮.೪ ಪ್ರತಿಶತದಿಂದ ೨.೮ ಪ್ರತಿಶತಕ್ಕೆ ಇಳಿದಿದ್ದರೆ, ನಗರ ಪ್ರದೇಶದಲ್ಲಿ ಬಡತನವು ೧೦.೭ ಪ್ರತಿಶತದಿಂದ ಕೇವಲ ೧.೧ ಪ್ರತಿಶತಕ್ಕೆ ಇಳಿದಿದೆ. ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟದಂತಹ ಅಂಶಗಳನ್ನು ಒಳಗೊಂಡಂತೆ ಬಹುಆಯಾಮದ ಬಡತನವನ್ನು ಕಡಿಮೆ ಮಾಡುವಲ್ಲಿ ಭಾರತವು ಬಲವಾದ ಸುಧಾರಣೆಯನ್ನು ಕಂಡಿದೆ. ಬಹುಆಯಾಮದ ಬಡತನ ಸೂಚ್ಯಂಕವು ೨೦೦೫-೦೬ರಲ್ಲಿ ಶೇಕಡ ೫೩.೮ ರಿಂದ

೨೦೧೯-೨೧ರಲ್ಲಿ ಶೇಕಡ ೧೬.೪ ಕ್ಕೆ ಇಳಿದಿದೆ ಮತ್ತು ೨೦೨೨-೨೩ರಲ್ಲಿ ಶೇಕಡ ೧೫.೫ ಕ್ಕೆ ಇಳಿದಿದೆ.

<><><><>

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಇಂದು ಮಧ್ಯಪ್ರದೇಶದ ಸೆಹೋರ್ ಜಿಲ್ಲೆಗೆ ಒಂದು ದಿನದ ಭೇಟಿ ನೀಡಲಿದ್ದಾರೆ. ಅವರು ಇಂದು ಮಧ್ಯಾಹ್ನ ಸೆಹೋರ್ ಮತ್ತು ಇಚಾವರ್‌ನಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ೫೧ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಕಾರ್ಯಗಳಿಗೆ ಭೂಮಿಪೂಜೆ ನೆರವೇರಿಸಲಿದ್ದಾರೆ. ಈ ವೇಳೆ ಮಧ್ಯಪ್ರದೇಶ ಮುಖ್ಯಮಂತ್ರಿ ಡಾ. ಮೋಹನ್ ಯಾದವ್ ಕೂಡ ಉಪಸ್ಥಿತರಿರಲಿದ್ದಾರೆ. ನಂತರ ಇಚಾವರ್‌ನಲ್ಲಿ ನಡೆಯಲಿರುವ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಉದ್ದೇಶಿಸಿ, ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಮಾತನಾಡಲಿದ್ದಾರೆ. ಬಳಿಕ ಸಂಜೆ ಭಖೇಡಿಯಲ್ಲಿ ರೈತರೊಂದಿಗೆ ಅವರು ಸಂವಾದ ನಡೆಸಲಿದ್ದಾರೆ.

<><><><>

ಕಳೆದ ಒಂದು ದಶಕದಲ್ಲಿ ಭಾರತ ಸರ್ವತೋಮುಖವಾಗಿ ಗಮನಾರ್ಹ ಬದಲಾವಣೆಯನ್ನು ಕಂಡಿದ್ದು, ಸೇವೆ, ಸುಶಾಸನ ಮತ್ತು ಗರೀಬ್ ಕಲ್ಯಾಣ್ ತತ್ವದಡಿ ಮುನ್ನಡೆಯುತ್ತಿದೆ. ಕೇಂದ್ರ ಸರ್ಕಾರ ಕಳೆದ ೧೧ ವರ್ಷಗಳಲ್ಲಿ ಕೈಗೊಂಡಿರುವ ಹಲವು ಪ್ರಮುಖ ಪ್ರಯತ್ನಗಳ ಕುರಿತು ಆಕಾಶವಾಣಿ ಸುದ್ದಿ ವಿಭಾಗ ವಿಶೇಷ ವರದಿಯನ್ನು ಪ್ರಸಾರ ಮಾಡುತ್ತಿದೆ. ಈ ಮಾಲಿಕೆಯಲ್ಲಿ ಇಂದು, ವನ್ಯಜೀವಿ ಸಂರಕ್ಷಣೆ ಕುರಿತ ಒಂದು ವರದಿ ಇಲ್ಲಿದೆ.

ಧ್ವನಿ: ವಿಶೇಷ ವರದಿ

<><><><>

ಇಂದು ಬಕ್ರೀದ್ ಹಬ್ಬ. ದೇಶಾದ್ಯಂತ ಬಕ್ರೀದ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಆಚರಿಸುತ್ತಿದ್ದಾರೆ. ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಅನೇಕ ಗಣ್ಯರು ಶುಭಾಶಯ ಕೋರಿದ್ದಾರೆ. ಈ ಹಬ್ಬ ತ್ಯಾಗ, ನಂಬಿಕೆ ಮತ್ತು ಮಾನವೀಯ ಮೌಲ್ಯಗಳ ಸಂಕೇತವೆಂದು ರಾಷ್ಟ್ರಪತಿಯವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ನಿಸ್ವಾರ್ಥತೆ ಮತ್ತು ಸಮರ್ಪಣೆಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕಾಗಿ

ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಮನವಿ ಮಾಡಿದ್ದಾರೆ. ಈ ಹಬ್ಬವು ಎಲ್ಲರಿಗೂ ತ್ಯಾಗದ ಶಕ್ತಿ ಮತ್ತು ಔದಾರ್ಯದ ಆಶೀರ್ವಾದವನ್ನು ನೆನಪಿಸುತ್ತದೆ. ಈದ್-ಉಲ್-ಜುಹಾ ಎತ್ತಿಹಿಡಿಯುವ ನಿಸ್ವಾರ್ಥತೆ ಮತ್ತು ಸೇವೆಯ ಮೌಲ್ಯಗಳು ದೇಶದ ಪ್ರಜಾಪ್ರಭುತ್ವದ ರಚನೆಯನ್ನು ಶ್ರೀಮಂತಗೊಳಿಸುವ ಮತ್ತು ನಮ್ಮ ವೈವಿಧ್ಯಮಯ ಸಮಾಜದ ಬಂಧಗಳನ್ನು ಬಲಪಡಿಸುವ ಕಾಲಾತೀತ ಸದ್ಗುಣಗಳಾಗಿವೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ಹಬ್ಬವು ಸಮಾಜದಲ್ಲಿ ಸಾಮರಸ್ಯದ ಸ್ಫೂರ್ತಿ ಮತ್ತು ಶಾಂತಿಯ ರಚನೆಯನ್ನು ಬಲಪಡಿಸಲಿ. ಎಲ್ಲಾ ನಾಗರಿಕರು ಉತ್ತಮ ಆರೋಗ್ಯ ಮತ್ತು ಸಮೃದ್ಧಿ ಹೊಂದಲಿ ಎಂದು ಪ್ರಧಾನಿ ನರೇಂದ್ರ ಮೋದಿ ಹಾರೈಸಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಜನತೆಗೆ ಬಕ್ರೀದ್ ಹಬ್ಬದ ಶುಭಾಶಯ ಕೋರಿದ್ದಾರೆ. ಈ ಪವಿತ್ರ ಹಬ್ಬವು ನಾಗರಿಕರ ಜೀವನದಲ್ಲಿ ಸಂತೋಷ, ಸಮೃದ್ಧಿ ಮತ್ತು ಸಕಾರಾತ್ಮಕ ಪರಿಣಾಮ ಬೀರುವ ಅವಕಾಶಗಳನ್ನು ಕರುಣಿಸಲಿ ಎಂದು ಅವರು ಹಾರೈಸಿದ್ದಾರೆ.

<><><>

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಟೆನಿಸ್ ಪಂದ್ಯಾವಳಿಯ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕಿತೆ ಅರಿನಾ ಸಬಲೆಂಕಾ ಹಾಗೂ ಎರಡನೇ ಶ್ರೇಯಾಂಕಿತೆ ಕೋಕೋ ಗೌಫ್ ಚೊಚ್ಚಲ ಪ್ರಶಸ್ತಿಗಾಗಿ ಇಂದು ಸೆಣಸಾಟ ನಡೆಸಲಿದ್ದಾರೆ. ಪಂದ್ಯ ಇಂದು ಸಂಜೆ ೬ ಗಂಟೆಗೆ ಆರಂಭವಾಗಲಿದೆ. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಹಾಗೂ ಇಟಲಿಯ ಜನ್ನಿಕ್ ಸಿನ್ನರ್ ನಡುವೆ ಸೆಣಸಾಟ ನಡೆಯಲಿದೆ. ನಾಳೆ ಫೈನಲ್ ಪಂದ್ಯ ನಡೆಯಲಿದೆ.

<><><>

ಭಾರತೀಯ ಕ್ರಿಕೆಟ್ ತಾರೆ ಸ್ಪಿನ್ ಬೌಲರ್ ಪಿಯುಶ್ ಚಾವ್ಲಾ ತಮ್ಮ ವೃತ್ತಿ ಜೀವನಕ್ಕೆ ನಿವೃತ್ತಿ ಘೋಷಿಸಿದ್ದಾರೆ. ೨೦ ವರ್ಷಗಳ ವೃತ್ತಿ ಜೀವನದ ನಂತರ ಎಲ್ಲಾ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಂದ ನಿವೃತ್ತಿ ಹೊಂದುತ್ತಿರುವುದಾಗಿ ಚಾವ್ಲಾ ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ. ೩೬ರ ಹರೆಯದ ಚಾವ್ಲಾ ಇಲ್ಲಿವರೆಗೆ ೩ ಟೆಸ್ಟ್ ಪಂದ್ಯಗಳು, ೨೫ ಏಕದಿನ ಪಂದ್ಯಗಳು, ಏಳು ಟಿ-೨೦ ಪಂದ್ಯಗಳನ್ನು ಆಡಿದ್ದಾರೆ. ೨೦೧೨ ರಲ್ಲಿ ಶ್ರೀಲಂಕಾದಲ್ಲಿ ನಡೆದ ಟಿ-೨೦ ವಿಶ್ವಕಪ್ ಪಂದ್ಯಾವಳಿಯಲ್ಲಿ ಚಾವ್ಲಾ ಕೊನೆಯ ಬಾರಿಗೆ ಆಡಿದ್ದರು. ಇದಕ್ಕೂ

ಮುಂಚೆ, ಚಾವ್ಲಾ ೨೦೦೭ ರ ಐಸಿಸಿ ಟಿ ೨೦ ವಿಶ್ವಕಪ್ ಮತ್ತು ನಂತರ ೨೦೧೧ ರ ಐಸಿಸಿ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತೀಯ ತಂಡದ ವಿಜಯದಲ್ಲಿ ಭಾಗಿಯಾಗಿದ್ದರು. ಇದಕ್ಕೂ ಮೊದಲು, ಚಾವ್ಲಾ ೨೦೦೭ರ ಐಸಿಸಿ ಟಿ-೨೦ ವಿಶ್ವಕಪ್ ಮತ್ತು ನಂತರ ೨೦೧೧ರ ಐಸಿಸಿ ಕ್ರಿಕೆಟ್ ವಿಶ್ವಕಪ್‌ನಲ್ಲಿ ವಿಜೇತ ಭಾರತೀಯ ತಂಡದ ಭಾಗವಾಗಿದ್ದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>